# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು 02 ವರ್ಷದ MBA/MPA ಸ್ನಾತಕೋತ್ತರ ಪದವಿಗೆ ವಿದೇಶಿ ವ್ಯಾಸಂಗಕ್ಕೆ ಆಯ್ಕೆ ಮಾಡುವ ಸಂಬಂಧ " ಪ್ರಬುದ್ಧ ಯೋಜನೆಯಡಿ ನಿಗಧಿ ಪಡಿಸಲಾಗಿದ ಮಾರ್ಗಸೂಚಿಗಳನ್ನು ಪರಿಷ್ಕರಿಸುವ ಬಗ್ಗೆ.

**ಓದಲಾಗಿದೆ:** ಸರ್ಕಾರದ ಆದೇಶ ಸಂಖ್ಯೆ: ಸಕಇ 468 ಪಕವಿ 2021, ದಿನಾಂಕ: 11-08-2021

****

ಮೇಲೆ ಓದಲಾದ ಕ್ರಮ ಸಂಖ್ಯೆ(1) ಸರ್ಕಾರದ ಆದೇಶದಲ್ಲಿ ಸರ್ಕಾರದ ಆದೇಶದಲ್ಲಿ ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ವಿದೇಶಿ ವ್ಯಾಸಂಗಕ್ಕೆ ಆಯ್ಕೆ ಮಾಡುವ ಸಂಬಂಧ "ಪ್ರಬುದ್ಧ ಯೋಜನೆಯಡಿ ನಿಗಧಿ ಪಡಿಸಲಾಗಿದ ಪರಿಷ್ಕೃತ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ, ಸದರಿ ಆದೇಶದಲ್ಲಿ **ಕ್ರ.ಸಂ:7ರ** ರಲ್ಲಿ ಅಭ್ಯರ್ಥಿಯ ಆಯ್ಕೆಯಲ್ಲಿನ ಷರತ್ತು 3ರಲ್ಲಿ ಕೆಳಕಂಡತೆ ಅವಕಾಶ ಕಲ್ಪಿಸಲಾಗಿದೆ.

"ಪ್ರಬುದ್ಧ ಯೋಜನೆಯಡಿ ಸ್ನಾತಕೋತ್ತರ ಪದವಿಗೆ ಆಯ್ಕೆಯಾಗಿ ಧನಸಹಾಯ ಪಡೆದ ಅಭ್ಯರ್ಥಿಯು ಮುಂದಿನ ದಿನಗಳಲ್ಲಿ ವಿದೇಶಿ ವಿಶ್ವವಿದ್ಯಾಲಯದಲ್ಲಿ ಪಿ.ಹೆಚ್.ಡಿ ಪ್ರವೇಶಕ್ಕೆ ಅವಕಾಶ ಹೊಂದಿದ್ದರೆ, ಅಂತಹ ಅಭ್ಯರ್ಥಿಗಳು, ಪ್ರಬುದ್ಧ ಯೋಜನೆಯಡಿ ಮತ್ತೊಮ್ಮೆ ಧನಸಹಾಯಕ್ಕೆ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ. ಆದರೆ, ಸ್ನಾತಕೋತ್ತರ ಪದವಿ ವ್ಯಾಸಂಗದ ಸಂದರ್ಭದಲ್ಲಿ ನೀಡಲಾಗಿದ್ದ ಧನಸಹಾಯದ ಮೊತ್ತವನ್ನು ಕಡಿತಗೊಳಿಸಿಕೊಂಡು ಉಳಿಕೆ ಧನಸಹಾಯನ್ನು ಮಾತ್ರ ಪಿ.ಹೆಚ್.ಡಿ ಅಧ್ಯಯನ ಸಂದರ್ಭದಲ್ಲಿ ಸೆಮಿಸ್ಟರ್‌ವಾರು ಲೆಕ್ಕಹಾಕಿ ಬಿಡುಗಡೆ ಮಾಡುವುದು."

ಮುಂದುವರೆದು, ವಿದೇಶಿ ವಿಶ್ವ ವಿದ್ಯಾಲಯಗಳ ನೀಡುವ ಒಂದು ವರ್ಷ ಸ್ನಾತಕೋತ್ತರ (MS) ಪದವಿಯು Association of Indian Universities (AIU) ಮಾರ್ಗಸೂಚಿ ಪ್ರಕಾರ ಭಾರತದಲ್ಲಿ ವಿಶ್ವ ವಿದ್ಯಾಲಯಗಳ ನೀಡುವ ಸ್ನಾತಕೋತ್ತರ ಪದವಿ ತತ್ಸಮಾನವಾಗಿರುವುದಿಲ್ಲ ಹಾಗೂ ವಿದೇಶಿ ವಿಶ್ವವಿದ್ಯಾಲಯದಲ್ಲಿ 04 ವರ್ಷಗಳ ಪಿ.ಹೆಚ್.ಡಿ ಅಧ್ಯಯನ ಮಾಡಲು ಒಬ್ಬ ಅಭ್ಯರ್ಥಿಗೆ ಅಂದಾಜು ಸುಮಾರು ರೂ.90.00 ರಿಂದ ರೂ.120.00 ಲಕ್ಷಗಳ ವೆಚ್ಚ ತಗುಲಲಿದ್ದು, 02 ವರ್ಷದ MBA/MPA ವ್ಯಾಸಂಗ ಮಾಡಲು ಪ್ರತಿ ಅಭ್ಯರ್ಥಿಗೆ ಸುಮಾರು ರೂ.50.00 ರಿಂದ ರೂ.60.00 ಲಕ್ಷಗಳ ವೆಚ್ಚವಾಗುವ ಸಾಧ್ಯತೆಯಿರುತ್ತದೆ. ಇದರಿಂದ ಒಬ್ಬ ಪಿ.ಹೆಚ್.ಡಿ ಅಭ್ಯರ್ಥಿಯ ವ್ಯಾಸಂಗಕ್ಕಾಗಿ ಭರಿಸುವ ಅನುದಾನದಲ್ಲಿ ಕನಿಷ್ಟ 02 ರಿಂದ 03 MBA / MPA ವಿದ್ಯಾರ್ಥಿಗಳನ್ನು ಆಯ್ಕೆ ಮಾಡಬಹುದಾಗಿರುತ್ತದೆ. ಆದರಿಂದ, ಪ್ರಸ್ತುತ

ಜಾರಿಯಲ್ಲಿರುವ ಪ್ರಬುದ್ಧ ಮಾರ್ಗಸೂಚಿಯನ್ನು ಮಾರ್ಪಡಿಸಿ ಪ್ರಬುದ್ಧ ಯೋಜನೆಯ ಸಹಾಯ ಧನದಿಂದ ಸ್ನಾತಕೋತ್ತರ ಪದವಿ ಪೂರೈಸಿದ ಅಭ್ಯರ್ಥಿಗಳಿಗೆ ಪಿ.ಹೆಚ್.ಡಿ ಅಧ್ಯಯನ ಮಾಡಲು ನೀಡಲಾಗಿದ್ದ ಅವಕಾಶವನ್ನು ಪ್ರಬುದ್ಧ ಯೋಜನೆಯಿಂದ ಕೈಬಿಡಲು ಹಾಗೂ ಮಾರ್ಗಸೂಚಿಯಲ್ಲಿ ಪ್ರಬುದ್ಧ ಯೋಜನೆಯ ಸಹಾಯಧನದಿಂದ ಒಂದು ವರ್ಷದ ಸ್ನಾತಕೋತ್ತರ ಪದವಿ ಪೂರೈಸಿದ ಅಭ್ಯರ್ಥಿಗಳಿಗೆ QS/US Overall Global World Ranking – 200 Ranking ನ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ MBA or MPA ಸ್ನಾತಕೋತ್ತರ ಪದವಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅವಕಾಶ ಕಲ್ಪಿಸಲು ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಸಕಇ 20 ಎಸ್‌ಎಲ್‌ಪಿ 2023 ಬೆಂಗಳೂರು, ದಿನಾಂಕ: 28-03-2023.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಂತೆ, 2023-24 ನೇ ಸಾಲಿನಿಂದ ಪ್ರಬುದ್ಧ ಯೋಜನೆಯ ಸಹಾಯಧನದಿಂದ ವಿದೇಶಿ ವಿಶ್ವ ವಿದ್ಯಾಲಯಗಳಲ್ಲಿ ಒಂದು ವರ್ಷದ ಸ್ನಾತಕೋತ್ತರ ಪದವಿ ಪೂರೈಸಿದ ಅಭ್ಯರ್ಥಿಗಳಿಗೆ ಎರಡು ವರ್ಷ MBA/MPA ಸ್ನಾತಕೋತ್ತರ ಪದವಿಯನ್ನು ಅಧ್ಯಯನ ಮಾಡಲು ಈ ಮಾರ್ಗಸೂಚಿ ಅನ್ವಯ ಅವಕಾಶ ಕಲ್ಪಿಸಲಾಗಿರುತ್ತದೆ.

1. ಅಭ್ಯರ್ಥಿಯು ಪ್ರಬುದ್ಧ ಯೋಜನೆಯ ಸಹಾಯಧನದಿಂದ ಒಂದು ವರ್ಷದ ಸ್ನಾತಕೋತ್ತರ ಪದವಿಯನ್ನು ವಿದೇಶಿ ವಿಶ್ವ ವಿದ್ಯಾಲಯಗಳಲ್ಲಿ ಪೂರೈಸಿರಬೇಕು.
2. ಅಭ್ಯರ್ಥಿಯು QS/US News ಪ್ರತಿ ವರ್ಷ ಪ್ರಕಟಿಸುವ Overall Global Ranking-200 ಒಳಗಿನ ವಿದೇಶಿ ವಿಶ್ವ ವಿದ್ಯಾಲಯಗಳಿಂದ Unconditional Offer Letter ಪಡೆದಿರಬೇಕು.
3. ಜಾತಿ-ಆದಾಯ ಪರಿಗಣನೆ ಹಾಗೂ ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದಂತೆ ಪ್ರಸ್ತುತ ಜಾರಿಯಲ್ಲಿರುವ ಪ್ರಬುದ್ಧ ಮಾರ್ಗಸೂಚಿ ಅನುಸಾರ ಕ್ರಮವಹಿಸುವುದು.
4. ಒಂದು ವರ್ಷದ ಸ್ನಾತಕೋತ್ತರ ಪದವಿ ಸಂಧರ್ಭದಲ್ಲಿ ನೀಡಲಾಗಿದ್ದ ಎಲ್ಲಾ ವೆಚ್ಚಗಳನ್ನು ಮರುಪಾವತಿಸಿಕೊಂಡು ಅಥವಾ ಕಡಿತಗೊಳಿಸಿಕೊಂಡು ಬಾಕಿ ಸಹಾಯ ಧನವನ್ನು ಇಲಾಖೆಯಿಂದ ಪ್ರಬುದ್ಧ ಮಾರ್ಗಸೂಚಿಯನ್ವಯ ಸೆಮಿಸ್ಟರ್ ವಾರು ಬಿಡುಗಡೆ ಮಾಡುವುದು.
5. ಕಡಿತಗೊಂಡ ಸಹಾಯಧನವನ್ನು ಹೊರತುಪಡಿಸಿ, ಉಳಿದ ವಿ.ವಿ. ಶುಲ್ಕ, ನಿರ್ವಹಣಾ ವೆಚ್ಚ, ವಿಮಾನಯಾನ ಶುಲ್ಕ, ಪ್ರಯಾಣ ವೆಚ್ಚ, ವೀಸಾ ವೆಚ್ಚ ಹಾಗೂ ಇತರೆ ವೆಚ್ಚವನ್ನು ಪ್ರಸ್ತುತ ಜಾರಿಯಲ್ಲಿರುವ ಪ್ರಬುದ್ಧ ಮಾರ್ಗಸೂಚಿ ಅನ್ವಯ ಬಿಡುಗಡೆ ಮಾಡುವುದು.
6. QS/US News ನಲ್ಲಿ ಪ್ರಕಟಿಸುವ Overall - 200 Rankin ನ ವಿಶ್ವ ವಿದ್ಯಾಲಯಗಳಲ್ಲಿ MBA or MPA ಸ್ನಾತಕೋತ್ತರ ಪದವಿ ಅಧ್ಯಯನ